ಭಾಷೆ ಬರುತ್ತಿರಲಿಲ್ಲವಂತೆ. ಇಡೀ ಸಿನಿಮಾ ಸೆಟ್ ತುಂಬಾ ಬರೀ ಇಟಾಲಿಯನ್ ಮಾತುಗಳೇ ತುಂಬಿದ್ದು, ಅದರ ಮುಖ್ಯ ನಾಯಕ ಕ್ಲಿಂಟ್ ಈಸ್ಟ್‌ವುಡ್‌ಗೆ ತಲೆ ಕೆಡುತ್ತಿತ್ತಂತೆ! ಎಲ್ಲಾ ಸಹನಟರು ಇಟಾಲಿಯನ್ ಭಾಷೆಯಲ್ಲಿಯೇ ತಮಗೆ ತೋಚಿದಂತೆ ಮಾತಾಡಿದ್ದು, ಅನಂತರ ಅವುಗಳನ್ನು ಇಂಗ್ಲಿಷಿಗೆ ಡಬ್ ಮಾಡಲಾಗಿದೆ. ಮತ್ತೊಂದು ದೇಶದ ಜನರಿಗಾಗಿ ಅವರ ನೆಲದ ಅವರ ಭಾಷೆಯ ಅವರ ಸಂಸ್ಕೃತಿಯ ಸಿನಿಮಾವನ್ನು ಬೇರೆ ದೇಶದವರು ಮಾಡಿ ಯಶಸ್ವಿಯಾಗುವುದು ಪವಾಡವಲ್ಲದೆ ಇನ್ನೇನು?

**Dollars Trilogy** (ಡಾಲರ್ಸ್ ತ್ರಿಸರಣಿ) ಎನ್ನುವ ಮೂರು ಸಿನಿಮಾಗಳ ಸರಣಿಗಳಲ್ಲಿ ಇದು ಕೊನೆಯ ಸಿನಿಮಾವಾಗಿದೆ. ಮೊದಲ ಎರಡಾದ **A fistful of Dollars** (1964) ಮತ್ತು **For a few dollars more** (1965) ಸುಮಾರು ಜನಪ್ರಿಯತೆಯನ್ನು ಗಳಿಸಿದ್ದವು. ಮೂರರಲ್ಲಿಯೂ ಕ್ಲಿಂಟ್ ಈಸ್ಟ್‌ವುಡ್‌ನೇ ನಾಯಕ. ಟೀವಿ ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಅವನಿಗೆ ಈ ಮೂರೂ ಸಿನಿಮಾ ಜಗತ್ತಿಗೆ ಪ್ರವೇಶ ದೊರಕಿಸಿ ಕೊಟ್ಟವು. ಜೊತೆಗೆ ಹಾಲಿವುಡ್‌ನ ಅತ್ಯುತ್ತಮ ನಾಯಕನನ್ನಾಗಿಸಿದವು. ಅವನ ಜನಪ್ರಿಯತೆ ಎಷ್ಟಾಯಿತೆಂದರೆ, ಆ ಕೌಬಾಯ್ ಇಮೇಜಿನಿಂದ ಹೊರಬರುವುದಕ್ಕೆ ದಶಕಗಳೇ ಹಿಡಿಯಿತು. ತ್ರಿಸರಣಿಯ ಮೂರನೆಯ ಸಿನಿಮಾವಾದ 'ದಿ ಗುಡ್ ದಿ ಬ್ಯಾಡ್ ಆ್ಯಂಡ್ ದಿ ಅಗ್ಲಿ' ಅಂತೂ ದಾಖಲೆಯ ಪ್ರದರ್ಶನವನ್ನು ಕಂಡಿತು. ಹೂಡಿದ ಹಣಕ್ಕೆ ಸುಮಾರು ಹದಿನೈದು ಪಟ್ಟು ಲಾಭವನ್ನು ಈ ಸಿನಿಮಾ ತಂದು ಕೊಟ್ಟಿತು.

ತಮಾಷೆಯ ಸಂಗತಿಯೆಂದರೆ ಈ ಸಿನಿಮಾಕ್ಕೆ ಆರಂಭದಲ್ಲಿ ಅಮೆರಿಕದಲ್ಲಿ ಉತ್ತಮ ವಿಮರ್ಶೆಯೇ ಸಿಗಲಿಲ್ಲ. ಎಲ್ಲೋ ದೂರದ ಇಟಾಲಿಯನ್ ದೇಶದ ಪ್ರಜೆಯೊಬ್ಬ ಮಾಡಿದ ಸಿನಿಮಾವನ್ನು ಯಾವ ದೇಶೀಯ ವಿಮರ್ಶಕ ಪೂರ್ವಗ್ರಹವಿಲ್ಲದೆ ಹೊಗಳಿಯಾನು? ಈ ಸಿನಿಮಾದಲ್ಲಿ ವಿಪರೀತ ಹಿಂಸೆ–ಕ್ರೌರ್ಯವಿದೆ ಎನ್ನುವ ಸಂಗತಿಯನ್ನೇ ನೆಪ ಮಾಡಿಕೊಂಡು ಇದನ್ನು ಹಿಗ್ಗಾಮುಗ್ಗಾ ಜರೆದಿದ್ದರು. ಆದರೆ ಜನತೆಯ ನ್ಯಾಯಾಲಯದಲ್ಲಿ ಉತ್ತಮ ಕಲಾಕೃತಿಗಳಿಗೆ ಎಂದೂ ಅನ್ಯಾಯವಾಗುವುದಿಲ್ಲ. ಅಲ್ಲಿಯ ನಿರ್ಣಾಯಕರಿಗೆ ಯಾವ ಪೂರ್ವಗ್ರಹಗಳೂ ಇರುವುದಿಲ್ಲ. ಆದ್ದರಿಂದ ಜಗತ್ತಿನಾದ್ಯಂತ ಈ ಚಿತ್ರ ಭರ್ಜರಿ ಯಶಸ್ಸನ್ನು ಕಂಡಿತು. ದಶಕಗಳ ನಂತರ ವಿಮರ್ಶಕರು ಎಚ್ಚೆತ್ತುಕೊಂಡು, ಈ ಸಿನಿಮಾದ ಮಹತ್ವವನ್ನು ಅರಿತುಕೊಂಡು ಹೊಗಳಲು ಶುರು ಮಾಡಿದ್ದು ಈಗ ಇತಿಹಾಸ.

'ಕ್ಲಾಸಿಕ್' ಸಿನಿಮಾಗಳನ್ನು ಯೋಜನೆ ಮಾಡಿ ಮಾಡಲಾಗುವುದಿಲ್ಲ; ಅವು ಪವಾಡಗಳು. ಎಲ್ಲಾ ಯೋಗಾಯೋಗಗಳೂ ಸೇರಿಕೊಂಡು ಇದ್ದಕ್ಕಿದ್ದಂತೆಯೇ ಸೃಷ್ಟಿಯಾಗುವ ವಿಸ್ಮಯಗಳು. ಅದನ್ನು ಸಾಧ್ಯವಾಗಿಸಿದ ಅದೇ ಜನರನ್ನು ಬಳಸಿಕೊಂಡು, ಇನ್ನಷ್ಟು ಸವಲತ್ತುಗಳನ್ನು ಒದಗಿಸಿಕೊಟ್ಟು, ಮತ್ತೊಮ್ಮೆ ಅಂತಹದೇ ಪವಾಡವನ್ನು ಸೃಷ್ಟಿಸಲು ಸಾಧ್ಯವೆ?


## ವಸುಧೇಂದ್ರ

ಸಣ್ಣಕತೆಗಾರ, ಪ್ರಬಂಧಕಾರ, ಅನುವಾದಕ ವಸುಧೇಂದ್ರ 'ಛಂದ ಪುಸ್ತಕ' ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಅವರು ಬಳ್ಳಾರಿಯ ಸಂಡೂರಿನವರು. ತಾವು ಮಾಡುತ್ತಿದ್ದ ಸಾಫ್ಟ್‌ವೇರ್ ಕೆಲಸಕ್ಕೆ ವಿದಾಯ ಹೇಳಿ ಪುಸ್ತಕ ಪ್ರಕಟಣೆ, ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕತೆ, ಪ್ರಬಂಧ, ಅನುವಾದಗಳ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.